**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ</u>**

**<u>ಸವಣೂರ</u>**

**<u>ದಿನಾಂಕ : 22 ನೇ ಜುಲೈ, 2026</u>**

**<u>ಉಪಸ್ಥಿತರು</u>**

**ಶ್ರೀ ಶ್ರೀನಿವಾಸ ಎಸ್.ಎನ್.**
**ಬಿ.ಎ., ಎಲ್.ಎಲ್. ಎಂ.,**
**ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಗಳು**
**ಸವಣೂರ**

**<u>ಸಿ . ಸಿ. ನಂ. 323/2016</u>**

**<u>ಫಿರ್ಯಾದುದಾರರು</u>**: ರಾಜ್ಯದ ಪರವಾಗಿ ಸವಣೂರ ಪೋಲೀಸ್ ಠಾಣೆ,
[ಪ್ರತಿನಿಧಿಸುವವರು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು]

ವಿರುದ್ಧ

**<u>ಆರೋಪಿತರು :</u>** ಆ-1. ಮಾಂತೇಶ ತಂದೆ ಬಸಪ್ಪ ಮರಡೂರ (ಮೃತ)
ಇವರನ್ನು ದಿನಾಂಕ 19-01-2021 ರ ಆದೇಶದಂತೆ ಈ ಪ್ರಕರಣದಿಂದ ಕೈ ಬಿಡಲಾಗಿದೆ.

**ಆ-2. ಮಲ್ಲವ್ವ ಕೋಂ. ಮಾಂತೇಶ ಮರಡೂರ**
ವಯಾ : 40 ವರ್ಷ, ಉದ್ಯೋಗ : ಮನೆಗೆಲಸ,
ವಾಸಃ ಹೆಸರೂರ ಗ್ರಾಮ,
ತಾಃ ಶಿಗ್ಗಾಂವ, ಜಿಃ ಹಾವೇರಿ

**ಆ-4. ಮಹಾದೇವಪ್ಪ ತಂದೆ ಶಿವಪ್ಪ ಮಾಡಲಗಿ**
ವಯಾ : 37 ವರ್ಷ, ಉದ್ಯೋಗ : ಕೂಲಿ ಕೆಲಸ,
ವಾಸಃ ನಾರಾಯಣಪುರ
ತಾಃ ಶಿಗ್ಗಾಂವ, ಜಿಃ ಹಾವೇರಿ

**ಆ-5. ಶೇಖಪ್ಪ ತಂದೆ ಶಿವಪ್ಪ ಮಾಡಲಗಿ**

ವಯಾ : 28 ವರ್ಷ, ಉದ್ಯೋಗ : ಕೂಲಿ ಕೆಲಸ,

ವಾಸಃ ನಾರಾಯಣಪುರ

ತಾಃ ಶಿಗ್ಗಾಂವ, ಜಿಃ ಹಾವೇರಿ

**ಆ-6. ಸುಮಂಗಲಾ ಕೋಂ. ವೀರಬದ್ರಪ್ಪ ಗೊಣೆಮ್ಮನವರ**

ವಯಾ : 30 ವರ್ಷ, ಉದ್ಯೋಗ : ಮನೆಗೆಲಸ,

ವಾಸಃ ಕಾಟೇನಹಳ್ಳಿ ಗ್ರಾಮ,

ತಾಃ ಹಾವೇರಿ, ಜಿಃ ಹಾವೇರಿ

ಹಾಲಿಃ ಹಾವೇರಿ ವೈದ್ಯ ಆಸ್ಪತ್ರೆಯ ಹತ್ತಿರ

ಆ-7. ದೇವಕ್ಕ ಕೋಂ. ಚನ್ನಯ್ಯ ನಂದಿಮಠ (ಮೃತ)
ಇವರನ್ನು ದಿನಾಂಕ 10-06-2019 ರ ಆದೇಶದಂತೆ ಈ ಪ್ರಕರಣದಿಂದ ಕೈ ಬಿಡಲಾಗಿದೆ.

[ಪರವಾಗಿ ಶ್ರೀ ಸಾದಿಕ ಕಣವಿ, ವಕೀಲರು]

| | |
|---|---|
| ಕೃತ್ಯ ನಡೆದ ದಿನ | 27-06-2015 ರಂದು ಮದ್ಯಾಹ್ನ 12-30 ಗಂಟೆಗೆ |
| ಪ್ರಕರಣ ದಾಖಲಾದ ದಿನಾಂಕ | 30-06-2015 ರಂದು ಸಂಜೆ 7.45 ಗಂಟೆಗೆ |
| ಪ್ರಕರಣದ ಸ್ವರೂಪ | ಭಾರತೀಯ ದಂಡ ಸಂಹಿತೆ ಕಾಯ್ದೆ ಕಲಂ.143, 147, 148, 447, 448, 451, 452, 323, 324, 354, 504, 506 ಮತ್ತು 109 ಸಹವಾಚಿತ ಕಲಂ.149 ರಡಿಯಲ್ಲಿ. |
| ವಿಚಾರಣೆ ಪ್ರಾರಂಭವಾದ ದಿನಾಂಕ | 20-07-2026 |
| ವಿಚಾರಣೆ ಮುಕ್ತಾಯವಾದ ದಿನಾಂಕ | 20-07-2026 |
| ತೀರ್ಪು ನೀಡಿದ ದಿನಾಂಕ | 22-07-2026 |
| ಪ್ರಕರಣದ ಒಟ್ಟು ಕಾಲಾವಧಿ | ವರ್ಷ ತಿಂಗಳು ದಿನ<br>11 00 22 |

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ.ಗಳು, ಸವಣೂರ

## ತೀರ್ಪು

ಪೊಲೀಸ್ ಸಬ್ ಇನ್ಸಪೆಕ್ಟರ, ಸವಣೂರ ಪೊಲೀಸ್ ಠಾಣೆ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಾಯ್ದೆ ಕಲಂ.143, 147, 148, 447, 448, 451, 452, 323, 324, 354, 504, 506 ಮತ್ತು 109 ಸಹವಾಚಿತ ಕಲಂ.149 ರಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ವಿವರಗಳು ಈ ಕೆಳಕಂಡಂತಿರುತ್ತದೆ :**

ಫಿರ್ಯಾದಿ ಹಾಗೂ ಆರೋಪಿತರು ಹೆಸರೂರ ಗ್ರಾಮದವರಿದ್ದು, ಫಿರ್ಯಾದುದಾರರು ಮತ್ತು ಆರೋಪಿತರು ಖಾಸಾ ಅಣ್ಣತಮ್ಮಂದಿರು ಇದ್ದು, ಇವರ ನಡುವೆ ಹೊಲವನ್ನು ವಾಟ್ನಿ ಮಾಡಿಸುವ ಸಂಬಂಧ ತಂಟೆ ಇದ್ದು, ಇದರಿಂದ ವೈಮನಸ್ಸು ಬೆಳೆದಿದ್ದು ಹೀಗಿರುವಾಗ, ದಿ: 27-06-2015 ರಂದು ಮದ್ಯಾಹ್ನ 12-30 ಗಂಟೆ ಸುಮಾರಿಗೆ ಫಿರ್ಯಾದಿ ಹಾಗೂ ಚಾಸಾ-4 [ಫಿರ್ಯಾದಿಯ ಹೆಂಡತಿ] ರವರು ತಮ್ಮ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ, ಫಿರ್ಯಾದಿಯ ಹೊಲದ ಪಕ್ಕದಲ್ಲಿ ಇದ್ದ 1 ನೇ ಆರೋಪಿ ತನ್ನ ಹೊಲದಲ್ಲಿ ಕೆಲಸಮಾಡುತ್ತಿದ್ದಾಗ, ಫಿರ್ಯಾದಿಯು 1 ನೇ ಆರೋಪಿಗೆ 'ಹಿರಿಯರು ಹೇಳಿದಂತೆ ತಿಪ್ಪಿಯ ಬಯಲು ಜಾಗೆಯನ್ನು ಬಿಟ್ಟುಕೊಡು' ಅಂತಾ ಕೇಳಿದ್ದಕ್ಕೆ, 1 ರಿಂದ 3 ನೇ ಆರೋಪಿತರು 4 ರಿಂದ 7 ನೇ ಆರೋಪಿತರ ಚಿತಾವಣೆಯಿಂದ ಫಿರ್ಯಾದಿಯ ಹೊಲದಲ್ಲಿ ಅತಿಕ್ರಮಣ ಪ್ರವೇಶ ಮಾಡಿ ಫಿರ್ಯಾದಿ ಹಾಗೂ ಚಾಸಾ-4 ರವರಿಗೆ 'ಲೇ ನಿಮ್ಮ ತಾಯಿನ ಹಡಾ ನಿಮಗೆ ಜಾಗ ಬಿಟ್ಟುಕೊಡಬೇಕಾ ಯಾವ ಜಾಗ ಬಾಡ್ಯಾ ನಿನ್ನ ಹೆಂಡತಿ ಹಾದರ ಕೆಲಸ ಮಾಡಿ ಹಿಡದಾಳೇನು ನಮ್ಮ ತಮ್ಮಂದಿರರು ಹಾಗೂ ನಮ್ಮ ತಂಗಿಯರು ಜಾಗೆಯನ್ನು ಬಿಟ್ಟು ಕೊಡಬೇಡರಿ ಮುಂದೆ ಬಂದಿದ್ದನ್ನು ನೋಡಿಕೊಳ್ಳುತ್ತೇವೆ ಅಂತಾ ಹೇಳ್ಯಾರ ನಾವು ಬಿಟ್ಟು ಕೊಡುವದಿಲ್ಲ' ಅಂತಾ ಅವಾಚ್ಯ

ಬೈದಾಡುತ್ತಾ 2 ಮತ್ತು 3 ನೇ ಆರೋಪಿತರು ಕಲ್ಲುಗಳನ್ನು ತೆಗೆದುಕೊಂಡು ಚಾಸಾ-4 ರವರು ಹೆಣ್ಣುಮಗಳು ಅಂತಾ ತಿಳಿದು ಅವಳ ತಲೆಗೆ ಹೊಡೆದು ಸಾದಾ ಸ್ವರೂಪದ ಗಾಯಪಡಿಸಿದ್ದು ಅಲ್ಲದೇ 'ನಾರಾಯಾಣಪುರದಿಂದ ನಮ್ಮವರು ಬಂದು ನಿಮ್ಮನ್ನು ನೋಡಿಕೊಳ್ಳುತ್ತಾರೆ' ಅಂತಾ ಬೆದರಿಕೆ ಹಾಕಿರುತ್ತಾರೆ.

ನಂತರ ಅದೇ ದಿವಸ ದಿ:27-06-2015 ರಂದು ರಾತ್ರಿ 11-00 ಗಂಟೆ ಸುಮಾರಿಗೆ ಆರೋಪಿತರ ಪೈಕಿ 1, 3, 4 ಮತ್ತು 5 ನೇ ಆರೋಪಿತರು ಕೂಡಿಕೊಂಡು ಹೆಸರೂರ ಗ್ರಾಮದಲ್ಲಿರುವ ಫಿರ್ಯಾದಿಯ ಮನೆಯಲ್ಲಿ [ಬಾಡಗಿ ಮನೆ] ಅತೀಕ್ರಮಣ ಪ್ರವೇಶ ಮಾಡಿ ಫಿರ್ಯಾದಿಯ ಮನೆಯಲ್ಲಿದ್ದ ಚಾಸಾ-5 ಮತ್ತು 6 [ಫಿರ್ಯಾದಿಯ ಮಕ್ಕಳು] ರವರಿಗೆ 'ಲೇ ಸೂಳೇ ಮಕ್ಕಳಾ ನಿಮ್ಮಪ್ಪ ನಿಮ್ಮವ್ವ ಎಲ್ಲಿ ಅದರಾ' ಅಂತಾ ಅವಾಚ್ಯ ಬೈದಾಡುತ್ತಾ ನಿಮ್ಮಪ್ಪರ ಎಲ್ಲಿ ಅದರಾ ಅಂತಾ ಹೇಳಿದಿದ್ದರೇ ಇವತ್ತ ನಿಮ್ಮನ್ನು ಬಿಡುವದಿಲ್ಲ ಅಂತಾ ಜೀವದ ಬೆದರಿಕೆ ಹಾಕಿರುತ್ತಾರೆ.

ಈ ಕುರಿತು ಚಾಸಾ-1 ರವರು ಸಲ್ಲಿಸಿದ ದೂರಿನ ಆಧಾರದಲ್ಲಿ ಸವಣೂರ ಪೋಲೀಸರು ತಮ್ಮ ಠಾಣಾ ಕ್ರೈಂ ನಂ.27/2016 ರಲ್ಲಿ ಭಾರತೀಯ ದಂಡ ಸಂಹಿತೆ ಕಾಯ್ದೆ ಕಲಂ.143, 147, 148, 447, 323, 324, 354, 504, 506 ಮತ್ತು 109 ಸಹವಾಚಿತ ಕಲಂ.149 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

**3.** ತನಿಖಾಧಿಕಾರಿಯು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಾಯ್ದೆ ಕಲಂ.143, 147, 148, 447, 323, 324, 354, 504, 506 ಮತ್ತು 109 ಸಹವಾಚಿತ ಕಲಂ.149 ರಡಿಯಲ್ಲಿ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ಆರೋಪಿತರು

ತಮ್ಮ ವಕೀಲರ ಮೂಲಕ ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಆರೋಪಿತರಿಗೆ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ಅಂತಿಮ ವರದಿಯ ಪ್ರತಿಯನ್ನು ನೀಡಲಾಗಿರುತ್ತದೆ. ನ್ಯಾಯಾಲಯವು ಆರೋಪಿತರ ವಿರುದ್ಧ ದೋಷರೋಪಣೆಯನ್ನು ಸಿದ್ಧಪಡಿಸಿ ಅವರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಅವರು ಆರೋಪಣೆಯನ್ನು ಅಲ್ಲಗಳೆದಿರುತ್ತಾರೆ. ನ್ಯಾಯಾಲಯವು ಅಭಿಯೋಜನೆಯ ಸಾಕ್ಷಿದಾರರ ವಿಚಾರಣೆಗಾಗಿ ಸಮನ್ಸನ್ನು ಹೊರಡಿಸಿರುತ್ತದೆ.

**4.** ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಬೀತುಪಡಿಸಲು ಪ್ರಾಸಾ-1 ರಿಂದ ಪ್ರಾಸಾ-3 ರವರನ್ನು ವಿಚಾರಣೆ ಮಾಡಿ ನಿಪಿ-1 ರಿಂದ 4 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಆರೋಪಿತು ಈ ಮೊದಲು ತಮ್ಮ ವಕೀಲರ ಮುಖಾಂತರ ಪ್ರತಿನಿಧಿಸಿದ್ದು, ನಂತರ ಆರೋಪಿತರೇ ತಮ್ಮ ಪ್ರಕರಣವನ್ನು ನಡೆಸುತ್ತೇವೆ ಎಂದು ಮನವಿಮಾಡಿದ್ದು, ಸದರಿ ಮನವಿಯನ್ನು ಮುರಸ್ಕರಿಸಿದ್ದು, ಆದಕಾರಣ ಆರೋಪಿತರೆ ತಮ್ಮ ಪ್ರಕರಣವನ್ನು ನಡೆಸಿರುತ್ತಾರೆ. ವಿಚಾರಣೆ ವೇಳೇಯಲ್ಲಿ 1 ಮತ್ತು 7 ನೇ ಆರೋಪಿತರು ಮರಣ ಹೊಂದಿರುತ್ತಾರೆ.

**5.** ಪ್ರಾಸಾ-1 ರಿಂದ 3 ರವರು ಪ್ರತಿಕೂಲ ಸಾಕ್ಷಿ ನುಡಿದಿದ್ದು, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅಂತಿಮ ವರದಿಯ ಇತರ ಸಾಕ್ಷಿದಾರರ ವಿಚಾರಣೆಗಾಗಿ ಸಮನ್ಸನ್ನು ಹೊರಡಿಸಬೇಕೆಂದು ಮನವಿ ಮಾಡಿರುತ್ತಾರೆ. ಪ್ರಾಸಾ-1 ರಿಂದ 3 ರವರು ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ ನ್ಯಾಯಾಲಯವು ಇತರ ಅಂತಿಮ ವರದಿಯ ಸಾಕ್ಷಿದಾರರ ವಿಚಾರಣೆಯನ್ನು ಮಾಡಿದರೆ ಅಭಿಯೋಜನೆಗೆ ಯಾವುದೇ ರೀತಿಯ ಸಹಾಯವಾಗುವುದಿಲ್ಲ ಎಂದು ಪರಿಗಣಿಸಿ ಹಾಗೂ ನ್ಯಾಯಾಲಯದ ಸಮಯವನ್ನು ಉಳಿಸುವುದಕ್ಕೋಸ್ಕರ ಸಹಾಯಕ ಸರ್ಕಾರಿ

ಅಭಿಯೋಜಕರ ಅಂತಿಮ ವರದಿಯಲ್ಲಿ ನಮೂದಿಸಿದ ಸಾಕ್ಷಿದಾರರಾದ ಚಾಸಾ-1, 4 ಮತ್ತು 5 ರವರನ್ನು ಹೊರತುಪಡಿಸಿ ಉಳಿದ ಸಾಕ್ಷಿದಾರರನ್ನು ವಿಚಾರಣೆಯಿಂದ ಕೈ ಬಿಡಲಾಗಿದೆ.

**6.** ನ್ಯಾಯಾಲಯವು ಕಡತವನ್ನು ಪರಿಶೀಲಿಸಿದಾಗ, ಆರೋಪಿತರ ವಿರುದ್ಧ ಯಾವುದೇ ಸೂಕ್ತವಾದ ಪ್ರಚೋದನಕಾರಿ ಸಾಕ್ಷ್ಯಾಧಾರಗಳು ಇಲ್ಲದೇ ಇರುವುದು ಕಂಡುಬಂದಿರುವುದರಿಂದ ಭಾರತೀಯ ದಂಡ ಸಂಹಿತೆಯ ಕಲಂ.313 ರಡಿಯಲ್ಲಿ ಆರೋಪಿತರ ಹೇಳಿಕೆ ಪಡೆದುಕೊಳ್ಳುವುದನ್ನು ಕೈ ಬಿಡಲಾಗಿದೆ.

**7.** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಮತ್ತು ಆರೋಪಿತರ ವಾದವನ್ನು ಆಲಿಸಲಾಯಿತು ಮತ್ತು ದಾಖಲೆಗಳನ್ನು ಪರಿಶೀಲಿಸಲಾಯಿತು.

**8.** ಈ ಮೇಲೆ ಹೇಳಿದ ಪ್ರಕರಣದ ವಸ್ತುಸ್ಥಿತಿಯ ಆಧಾರದ ಮೇಲೆ ನ್ಯಾಯಾಲಯವು ಈ ಕೆಳಕಂಡ ಅಂಶಗಳನ್ನು ನಿರ್ಧರಿಸಬೇಕಾಗಿರುತ್ತದೆಃ-

(1). ಆರೋಪಿತರಾದ 1, ಮತ್ತು 2 ಹಾಗು 4 ರಿಂದ 7 ದಿಃ 27-06-2015 ರಂದು ಮಧ್ಯಾಹ್ನ 12.30 ಗಂಟೆ ಸುಮಾರಿಗೆ ಫಿರ್ಯಾದಿ ಹಾಗು ಅವರ ಹೆಂಡತಿ ತಮ್ಮ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರು ಅಪರಾಧ ಮಾಡುವ ಏಕೋದ್ದೇಶದಿಂದ ಸಂಗನಮತ ಮಾಡಿಕೊಂಡು ಅಕ್ರಮಕೂಟ ರಚಿಸಿ ಅದರ ಸದಸ್ಯರಾಗಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 143 ಸಹ ವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

(2). ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ ದೊಂಬಿ ಮಾಡಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 147 ಸಹ ವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

(3). ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ರಚಿಸಿ, ಆಯುಧವನ್ನು ಉಪಯೋಗಿಸಿ ದೊಂಬಿ ಮಾಡಿದ್ದು, ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 148 ಸಹ ವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

(4). ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 1 ಮತ್ತು 2 ಹಾಗು 4 ರಿಂದ 7 ರವರು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಫಿರ್ಯಾದಿಯ ಹೊಲವನ್ನು ಅತ್ರಿಕಮಣ ಪ್ರವೇಶ ಮಾಡಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 447 ಸಹವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

(5). ಮೇಲ್ಕಾಣಿಸಿದ ದಿನಾಂಕದಂದು ರಾತ್ರಿ 11-00 ಗಂಟೆಗೆ ಆರೋಪಿತರಾದ 1, 3, 4 ಮತ್ತು 5 ರವರು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಹೆಸರೂರ ಗ್ರಾಮದಲ್ಲಿರುವ ಫಿರ್ಯಾದಿಯ ಮನೆಯನ್ನು ಅತ್ರಿಕಮಣ ಪ್ರವೇಶ ಮಾಡಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 448 ಸಹವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

(6). ಮೇಲ್ಕಾಣಿಸಿದ ದಿನಾಂಕದಂದು ರಾತ್ರಿ 11-00 ಗಂಟೆಗೆ ಆರೋಪಿತರಾದ 1, 3, 4 ಮತ್ತು 5 ರವರು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಫಿರ್ಯಾದಿಯ ಮನೆಯನ್ನು ಪ್ರವೇಶ ಮಾಡಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 451 ಸಹವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

(7). ಮೇಲ್ಕಾಣಿಸಿದ ದಿನಾಂಕದಂದು ರಾತ್ರಿ 11-00 ಗಂಟೆಗೆ ಆರೋಪಿತರಾದ 1, 3, 4 ಮತ್ತು 5 ರವರು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಗಾಯ, ಹಲ್ಲೆ ಪಡಿಸಲು ಫಿರ್ಯಾದಿಯ ಮನೆಯನ್ನು ಪ್ರವೇಶ ಮಾಡಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 452 ಸಹವಾಚಿತ

ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

(8). ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 1 ಮತ್ತು 2 ಹಾಗು 4 ರಿಂದ 7 ರವರು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಫಿರ್ಯಾದಿ ಮತ್ತು ಅವರ ಹೆಂಡತಿಗೆ ಕೈಯಿಂದ ಹೊಡೆದು ಸಾದಾ ಸ್ವರೂಪದ ಗಾಯ ಪಡಿಸಿದ್ದು, ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 323 ಸಹವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

(9). ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 1 ಮತ್ತು 2 ಹಾಗು 4 ರಿಂದ 7 ರವರು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮಕೂಟ ಸೇರಿ ಫಿರ್ಯಾದಿ ಮತ್ತು ಅವರ ಹೆಂಡತಿಗೆ ಬ್ಯಾಕೋಲು ಹಾಗು ಕಲ್ಲಿನಿಂದ ಹೊಡೆದು ಸಾದಾ ಸ್ವರೂಪದ ಗಾಯ ಪಡಿಸಿದ್ದು, ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 324 ಸಹವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

(10). ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 2 ಮತ್ತು 3 ರವರು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಸಾಕ್ಷಿದಾರ ನಂ: 4 ರವರು ಮಹಿಳೆ ಅಂತಾ ತಿಳಿದೂ ಅವಳ ತಲೆಗೆ ಹೊಡೆದು ಅವಮಾನ ಪಡಿಸಿದ್ದು, ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 354 ಸಹವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ ?

(11). ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 1 ಮತ್ತು 2 ಹಾಗು 4 ರಿಂದ 7 ರವರು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಫಿರ್ಯಾದಿಗೆ ಮತ್ತು ಅವರ ಹೆಂಡತಿಗೆ ಲೇ ಸೂಳೆ ಮಕ್ಕಳಾ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತಿ ಭಂಗವುಂಟು ಮಾಡುವಂತೆ ಉದ್ರೇಕಿಸಿ ಅವರ ಮಾನಕ್ಕೆ ಕುಂದು ಬರುವಂತೆ ಮಾಡಿದ್ದು, ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 504 ಸಹ ವಾಚಿತ

ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

(12). ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 1 ಮತ್ತು 2 ಹಾಗು 4 ರಿಂದ 7 ರವರು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಇವತ್ತ ನಿಮ್ಮನ್ನು ಬಿಡುವದಿಲ್ಲಾ ಅಂತ ಜೀವದ ಬೆದರಿಕೆ ಹಾಕಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 506 ಸಹ ವಾಚಿತ ಕಲಂ 149 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

(13). ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ 1 ಮತ್ತು 2 ಹಾಗು 4 ರಿಂದ 7 ರವರು ಅಪರಾಧ ಮಾಡುವ ಏಕೋದ್ದೇಶದಿಂದ ಅಕ್ರಮ ಕೂಟ ಸೇರಿ, ಆರೋಪಿ ನಂಃ 1 ಇವರು ಆರೋಪಿ ನಂ: 4 ರಿಂದ 7 ನೇದವರ ಚಿತಾವಣೆಯಿಂದ ಫಿರ್ಯಾದಿಯ ಹೊಲದಲ್ಲಿ ಅತೀಕ್ರಮಣ ಪ್ರವೇಶ ಮಾಡಿದ್ದು ಆ ಮೂಲಕ ಭಾರತ ದಂಡ ಸಂಹಿತೆಯ ಕಲಂ 109 ಸಹ ವಾಚಿತ ಕಲಂ 149. ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತುಪಡಿಸುತ್ತದೆಯೇ?

(14). ಏನು ಆದೇಶ?

**9.** ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ ಸಂಖ್ಯೆ :1 ರಿಂದ 13: ನಕಾರಾತ್ಮಕವಾಗಿ

ಅಂಶ ಸಂಖ್ಯೆ :14 : ಅಂತಿಮ ಆದೇಶದ ಪ್ರಕಾರ ಈ ಕೆಳಕಂಡ ಕಾರಣಗಳಿಗಾಗಿ;-

- : **ಕಾರಣಗಳು** :-

**10.** **ಅಂಶ ಸಂಖ್ಯೆ :-1 ರಿಂದ 13** : - ಈ ಹದಿಮೂರು ಅಂಶಗಳು ಒಂದಕ್ಕೊಂದು ಪೂರಕವಾದ ಕಾರಣ ಹಾಗೂ ವಸ್ತು ಸಂಗತಿಗಳು ಪುನರಾವರ್ತನೆಯಾಗುವುದನ್ನು ತಪ್ಪಿಸಲು, ಸದರಿ ಈ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಯಿತು.

**11.** ಅಭಿಯೋಜನೆಯು ಈ ಪ್ರಕರಣದ ಫಿರ್ಯಾದುದಾರರಾದ ಚಾಸಾ-1/ಸುರೇಶ ಮರಡೂರ ಇವರನ್ನು ಪ್ರಾಸಾ-1 ರವರನ್ನಾಗಿ ವಿಚಾರಣೆ ಮಾಡಿರುತ್ತದೆ. ಪ್ರಾಸಾ-1 ತಮ್ಮ ಸಾಕ್ಷ್ಯದಲ್ಲಿ, ತಾನು ಯಾವುದೇ ಘಟನಾ ಜಾಗವನ್ನು ತೋರಿಸಿರುವುದಿಲ್ಲ. ತನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿರುವುದಿಲ್ಲ. ಭಾವಚಿತ್ರವನ್ನು ಯಾವ ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂದು ತನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ನ್ಯಾಯಾಲಯದ ಮುಂದೆ ಮುದ್ದೆ ಮಾಲನ್ನು ನೋಡಿ ಗುರಿತಿಸಿರುವುದಿಲ್ಲ. ಪ್ರಾಸಾ-1 ರವರು ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿಯ ಮೇರೆಗೆ ಅವರನ್ನು ಪಾಟೀ ಸವಾಲು ಮಾಡಿದಾಗ, ಪ್ರಾಸಾ-1 ರವರು ಆರೋಪಿತರ ವಿರುದ್ಧ ಯಾವುದೇ ಪ್ರಚೋದನಕಾರಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರು ಕೇಳಿದ ಎಲ್ಲಾ ಪ್ರಶ್ನೆಗಳನ್ನು ಅವರು ನಿರಾಕರಿಸಿರುತ್ತಾರೆ.

**12.** ಅಭಿಯೋಜನೆಯು ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-2/ಶೋಭಾ ಮರಡೂರ ಇವರನ್ನು ಪ್ರಾಸಾ-2 ರವರನ್ನಾಗಿ ವಿಚಾರಣೆ ಮಾಡಿರುತ್ತದೆ. ಪ್ರಾಸಾ-2 ತಮ್ಮ ಸಾಕ್ಷ್ಯದಲ್ಲಿ, ತಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿಲ್ಲ. ತನಗೆ ಹುಷಾರಿಲ್ಲದೇ ಇದ್ದ ಕಾರಣ ತಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದು ನುಡಿದಿರುತ್ತಾರೆ. ನ್ಯಾಯಾಲಯದ ಮುಂದೆ ಮುದ್ದೆ ಮಾಲನ್ನು ನೋಡಿ ಗುರಿತಿಸಿರುವುದಿಲ್ಲ. ಪ್ರಾಸಾ-2 ರವರು ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿಯ ಮೇರೆಗೆ ಅವರನ್ನು ಪಾಟೀ ಸವಾಲು ಮಾಡಿದಾಗ, ಪ್ರಾಸಾ-1 ರವರು ಆರೋಪಿತರ ವಿರುದ್ಧ ಯಾವುದೇ ಪ್ರಚೋದನಕಾರಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರು ಕೇಳಿದ ಎಲ್ಲಾ ಪ್ರಶ್ನೆಗಳನ್ನು ಅವರು ನಿರಾಕರಿಸಿರುತ್ತಾರೆ.

**13.** ಅಭಿಯೋಜನೆಯು ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-3/ಸುನೀಲ ಮರಡೂರ ಇವರನ್ನು ಪ್ರಾಸಾ-3 ರವರನ್ನಾಗಿ ವಿಚಾರಣೆ ಮಾಡಿರುತ್ತದೆ. ಪ್ರಾಸಾ-3 ತಮ್ಮ ಸಾಕ್ಷ್ಯದಲ್ಲಿ, ತಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿಲ್ಲ ಎಂದು ನುಡಿದಿರುತ್ತಾರೆ. ನ್ಯಾಯಾಲಯದ ಮುಂದೆ ಮುದ್ದೆ ಮಾಲನ್ನು ನೋಡಿ ಗುರಿತಿಸಿರುವುದಿಲ್ಲ. ಪ್ರಾಸಾ-3 ರವರು ಪ್ರತಿಕೂಲ ಸಾಕ್ಷ್ಯ ನುಡಿದಿದ್ದರಿಂದ, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಅನುಮತಿಯ ಮೇರೆಗೆ ಅವರನ್ನು ಪಾಟೀ ಸವಾಲು ಮಾಡಿದಾಗ, ಪ್ರಾಸಾ-3 ರವರು ಆರೋಪಿತರ ವಿರುದ್ಧ ಯಾವುದೇ ಪ್ರಚೋದನಕಾರಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರು ಕೇಳಿದ ಎಲ್ಲಾ ಪ್ರಶ್ನೆಗಳನ್ನು ಅವರು ನಿರಾಕರಿಸಿರುತ್ತಾರೆ.

**14.** ಪ್ರಾಸಾ-1 ರಿಂದ 3 ರವರು ತಮ್ಮ ಸಾಕ್ಷ್ಯದಲ್ಲಿ ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿಯದೆ, ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ-1 ರಿಂದ 3 ರವರು ತಾವು ಗುರುತಿಸಿರುವ ನಿಪಿ-1 ರಿಂದ 4 ರ ನಿಶಾನೆಗಳಿಗೆ ಅನುಗುಣವಾಗಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ ಹಾಗೂ ತನಿಖಾಧಿಕಾರಿಗಳ ಮುಂದೆ ನೀಡಿದ ಹೇಳಿಕೆಯನ್ನು ನ್ಯಾಯಾಲಯದಲ್ಲಿ ಪುನರಾವರ್ತಿಸಲು ಸಾಧ್ಯವಾಗಿರುವುದಿಲ್ಲ. ಪ್ರಾಸಾ-1 ರಿಂದ 3 ರವರು ಸಂಪೂರ್ಣವಾಗಿ ಅಭಿಯೋಜನೆ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದು ಪ್ರತಿಕೂಲ ಸಾಕ್ಷಿದಾರರಾಗಿ ಪರಿಗಣಿಸಿರುತ್ತಾರೆ ಹಾಗೂ ಅಭಿಯೋಜನೆಯು ಆರೋಪಿತರ ವಿರುದ್ಧ ಮಾಡಿದ ಆರೋಪಣೆಯನ್ನು ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತದೆ.

**15.** ಆರೋಪಿತರು ಆಸ್ತಿ ಕೊಡಿಸುವಂತೆ ಕೋರಿದ್ದು, ಸದರಿ ಪ್ರಕರಣವು ಅಪರಾಧಕ್ಕೆ ಸಂಬಂದಪಟ್ಟಿದ್ದಾಗಿದ್ದು, ಇದರಲ್ಲಿ ಆಸ್ತಿ ಕೊಡಿಸುವ ಪ್ರಸಂಗ ಬರುವುದಿಲ್ಲ ಎಂದು ಮಾನ್ಯ ನ್ಯಾಯಾಲಯವು ಆರೋಪಿತರಿಗೆ ಮನವರಿಕೆ ಮಾಡಿಸಿರುತ್ತದೆ. ಈ ಹಂತದಲ್ಲಿ ಪ್ರಾಸಾ-1 ರಿಂದ 3 ರವರು ಆರೋಪಿತರ ವಿರುದ್ಧ ಯಾವುದೇ ಸಾಕ್ಷ್ಯವನ್ನು ನುಡಿಯದೇ ಇರುವುದರಿಂದ

ಅಭಿಯೋಜನೆಯು ಭಾರತೀಯ ದಂಡ ಸಂಹಿತೆ ಕಲಂ.143, 147, 148, 447, 448, 451, 452, 323, 324, 354, 504, 506 ಮತ್ತು 109 ಸಹವಾಚಿತ ಕಲಂ.149 ರಡಿಯಲ್ಲಿನ ಘಟಕಾಂಶಗಳನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿರುತ್ತದೆ. ಆರೋಪಿತರು ಅಪರಾಧ ಮಾಡಿದ್ದಾರೆಂದು ಹೇಳುವಷ್ಟರ ಮಟ್ಟಿಗೆ ಯಾವುದೇ ಸಾಕ್ಷ್ಯಾಧಾರಗಳು ಇಲ್ಲದಿರುವುದರಿಂದ ಹಾಗೂ ಆರೋಪಿತರು ಮಾಡಿರುವ ಅಪರಾಧವನ್ನು ನಿಸ್ಸಂಶಯವಾಗಿ ರುಜುವಾತುಪಡಿಸಲು ವಿಫಲವಾಗಿರುವುದರಿಂದ ಆರೋಪಿತರಿಗೆ ಸಂಶಯದ ಲಾಭ ನೀಡಿ, ಈ ನ್ಯಾಯಾಲಯವು ಮೇಲೆ ಹೇಳಿದ **ಅಂಶ 1 ರಿಂದ 13 ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತದೆ.**

**16.** **ಅಂಶ ಸಂಖ್ಯೆ.14**: - ಅಂಶ-1 ರಿಂದ 13 ರಲ್ಲಿ ವಿವರಿಸಿದ ವಸ್ತುಸ್ಥಿತಿ ಹಾಗೂ ಕಾರಣಗಳ ಆಧಾರದ ಮೇಲೆ, ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## **ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1) ರನ್ವಯ 2, 4, 5 ಮತ್ತು 6ನೇ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಾಯ್ದೆ ಕಲಂ.143, 147, 148, 447, 448, 451, 452, 323, 324, 354, 504, 506 ಮತ್ತು 109 ಸಹವಾಚಿತ ಕಲಂ.149 ರಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧಗಳಿಂದ ನಿರ್ದೋಷಿಗಳು ಎಂದು ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

ಸೆಕ್ಷನ್ 437(ಎ) ಸಿ.ಆರ್.ಪಿ.ಸಿ ರಡಿಯಲ್ಲಿ ಆರೋಪಿತರು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಇಂದಿನಿಂದ ಆರು ತಿಂಗಳವರೆಗೆ ಜಾರಿಯಲ್ಲಿರುತ್ತದೆ.

ಪಿ.ಎಫ್. ಸಂಖ್ಯೆ: 59/2015 (PR No.17/2021) ರಲ್ಲಿ ಅಮಾನತ್ತು ಪಡಿಸಿಕೊಂಡಿರುವ ಎರಡು ಹಿಡಿಗಾತ್ರದ ಕಲ್ಲುಗಳು ಬೆಲೆಬಾಳದ ವಸ್ತುಗಳಾದ ಕಾರಣ, ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.

ಆರೋಪಿತರು ಹಾಗೂ ಅವರ ಜಾಮೀನುದಾರರು ಬರೆದುಕೊಟ್ಟ ಮುಚ್ಚಳಿಕೆ ಪತ್ರವನ್ನು ರದ್ದುಪಡಿಸಲಾಗಿದೆ.

*(ಶೀಘ್ರಲಿಪಿಗಾರನಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟಿದ್ದು, ಬಳಿಕ ಅನುಲಿಪಿಯನ್ನು ಪರಿಶೀಲಿಸಿ, ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಅಂದರೆ ದಿನಾಂಕ 22 ನೇ ಜುಲೈ, 2026 ರಂದು ಘೋಷಿಸಿದ್ದೇನೆ. )*

SRINIVASA S N
Digitally signed by SRINIVASA S N
Date: 2026.07.23 14:05:37 +0530

(ಶ್ರೀನಿವಾಸ. ಎಸ್.ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ.ಗಳು, ಸವಣೂರ

## * ಅನುಬಂಧ *

**1. ಅಭಿಯೋಜನೆಯ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ** -

| | |
|---|---|
| ಪ್ರಾ.ಸಾ-1: | ಸುರೇಶ ಮರಡೂರ |
| ಪ್ರಾ.ಸಾ-2: | ಶೋಭಾ ಮರಡೂರ |
| ಪ್ರಾ.ಸಾ-3: | ಸುನೀಲ ಮರಡೂರ |

**2. ಅಭಿಯೋಜನೆಯ ಪರವಾಗಿ ಹಾಜರು ಪಡಿಸಿದ ದಾಖಲೆಗಳ ಪಟ್ಟಿ:** -

| | |
|---|---|
| ನಿಪಿ-1: | ದೂರು |
| ನಿಪಿ-1(ಎ): | ಪ್ರಾ.ಸಾ- ರವರ ಸಹಿ |
| ನಿಪಿ-2 : | ಭಾವಚಿತ್ರ |
| ನಿಪಿ-3: | ಪ್ರಾ.ಸಾ-2 ರವರ ಹೇಳಿಕೆ |
| ನಿಪಿ-4 : | ಪ್ರಾ.ಸಾ-3 ರವರ ಹೇಳಿಕೆ |

3. **<u>ಅಭಿಯೋಜನೆಯ ಪರವಾಗಿ ಗುರುತಿಸಿರುವ ಮುದ್ದೆಮಾಲು ಪಟ್ಟಿ</u>:-** - ಇಲ್ಲ -

4. **<u>ಆರೋಪಿ ಪರವಾಗಿ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿ</u> :-** - ಇಲ್ಲ -

5. **<u>ಆರೋಪಿ ಪರವಾಗಿ ಹಾಜರು ಪಡಿಸಿದ ದಾಖಲೆಗಳ ಪಟ್ಟಿ</u> :-** - ಇಲ್ಲ -

(ಶ್ರೀನಿವಾಸ. ಎಸ್.ಎನ್)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ.ಗಳು, ಸವಣೂರ